# ಮುರುಘಾ ಮಠದಲ್ಲಿ ೧೯ ಜೋಡಿ ಕಲ್ಯಾಣ ಮಹೋತ್ಸವ

ಚಿತ್ರದುರ್ಗ : ಯಾರ ಬಳಿಯೂ ಭೌತಿಕ ಸಂಪತ್ತು ಶಾಶ್ವತವಾಗಿ ಉಳಿಯುವುದಿಲ್ಲ. ಆದರೆ ಜ್ಞಾನ ಸಂಪತ್ತು ಶಾಶ್ವತವಾದುದು. ಇದು ಜೀವನದ ವಿಪತ್ತುಗಳನ್ನು ನಿವಾರಿಸುತ್ತದೆ ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ಹೇಳಿದರು.

ಬಸವಕೇಂದ್ರ ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠದಲ್ಲಿ ಎಸ್.ಜೆ.ಎಂ. ಶಾಂತಿ ಮತ್ತು ಪ್ರಗತಿ ಫೌಂಡೇಶನ್ (ರಿ) ಚಿತ್ರದುರ್ಗ ಇವರ ಸಹಯೋಗದಲ್ಲಿ ನಡೆದ ಮೂವತ್ತೆರಡನೆ ವರ್ಷದ ಎರಡನೇ ತಿಂಗಳ ಸಾಮೂಹಿಕ ಕಲ್ಯಾಣ ಮಹೋತ್ಸವದ ಅಧ್ಯಕ್ಷತೆ ವಹಿಸಿ ಮಾತನಾಡಿದ ಶ್ರೀಗಳು, ಯಶಸ್ವಿ ಬದುಕನ್ನು ನಡೆಸಲು ಉತ್ತಮ ಮಾತುಗಳು ಬೇಕು. ಸಮಾಜದಲ್ಲಿ ಜೈಲುಗಳ ಸಂಖ್ಯೆ ಹೆಚ್ಚಾದಷ್ಟು ಅಪರಾಧಿಗಳ ಸಂಖ್ಯೆ ಹೆಚ್ಚಾಗುತ್ತದೆ. ಹಾಗಾಗಿ ಶಾಲಾಕಾಲೇಜುಗಳ ಸಂಖ್ಯೆ ಹೆಚ್ಚಾದರೆ ಅಪರಾಧಿಗಳ ಸಂಖ್ಯೆ ಕಡಿಮೆಯಾಗುತ್ತದೆ. ಮಕ್ಕಳನ್ನು ಜೀತಕ್ಕೆ ಕಳುಹಿಸಬೇಡಿ. ಅವರನ್ನು ಶಾಲೆಗೆ ಕಳುಹಿಸಿ. ಮಕ್ಕಳಿಗೆ ಆಸ್ತಿಯನ್ನು ಮಾಡದೆ ಹೋದರೂ ಸುಶಿಕ್ಷಿತರನ್ನಾಗಿ ಮಾಡಿ. ಹಣ ಆಸ್ತಿ ಇದ್ದರೆ ಕಚ್ಚಾಟ ಹೆಚ್ಚಾಗುತ್ತದೆ. ಸಾಲ ಮಾಡಿಯಾದರೂ ಮಕ್ಕಳನ್ನು ಶಿಕ್ಷಣವಂತರನ್ನಾಗಿ ಮಾಡಿ. ಶಿಕ್ಷಣದಿಂದ ಬಲಿಷ್ಠ ಸಮಾಜ ನಿರ್ಮಾಣ ಮಾಡಬೇಕೆಂದರು.

ಬೆಂಗಳೂರು ಅಕ್ಕಿಪೇಟೆ ದೊಡ್ಡಮಠದ ಶ್ರೀ ಶಿವಬಸವ ಸ್ವಾಮಿಗಳು ಮಾತನಾಡಿ, ಸಾಮೂಹಿಕ ವಿವಾಹ ಔಚಿತ್ಯಪೂರ್ಣವಾದುದು. ಜನರು ಆರ್ಥಿಕ ಸಂಕಷ್ಟದಿಂದ ಬಳಲುತ್ತಿರುವಾಗ ಸಾಲ ಮಾಡಿ ವೈಭವದ ವಿವಾಹ ಮಾಡಿ ಸಂಕಷ್ಟಕ್ಕೆ ಸಿಲುಕದೆ ಇಂತಹ ಸಾಮೂಹಿಕ ಕಲ್ಯಾಣ ಮಹೋತ್ಸವದಲ್ಲಿ ಭಾಗವಹಿಸಿ ವಿವಾಹ ನೆರವೇರಿಸುವುದು ಸೂಕ್ತ. 32ವರ್ಷಗಳಿಂದ ನಿರಂತರವಾಗಿ ಕಲ್ಯಾಣ ಮಹೋತ್ಸವ ಮಾಡುತ್ತಿರುವುದು ಸಾಮಾನ್ಯ ಮಾತಲ್ಲ. ಇದು ಶಕ್ತಿವಂತರಿಗೆ ಮಾತ್ರ ಸಾಧ್ಯ ಎಂದರು.

ಮುಖ್ಯಅತಿಥಿ ಎಂ.ಮಲ್ಲಣ್ಣ ಮಾತನಾಡಿ, ಶಿಕ್ಷಣವೆ ಶ್ರೇಷ್ಠ ಸಂಪತ್ತು. ಉನ್ನತಶಿಕ್ಷಣದಿಂದ ಗೌರವ ಪ್ರಾಪ್ತಿಯಾಗುತ್ತದೆ. ಶಿಕ್ಷಣದಿಂದ ಸಂಸ್ಕಾರ ಪಡೆಯಲು ಸಾಧ್ಯ. ಸಾಮೂಹಿಕ ಕಲ್ಯಾಣ ಮಹೋತ್ಸವ ರಾಷ್ಟ್ರದಲ್ಲಿ ಒಂದು ಕ್ರಾಂತಿ ಮಾಡುತ್ತಿದೆ. ಎಲ್ಲ ಮಕ್ಕಳನ್ನು ಕಡ್ಡಾಯವಾಗಿ ಶಾಲೆಗೆ ಕಳುಹಿಸಿ ಎಂದು ಹೇಳಿದರು.

ಈ ಸಂದರ್ಭದಲ್ಲಿ 19 ಜೋಡಿಗಳ ವಿವಾಹ ನೆರವೇರಿತು. ಎಸ್.ಜೆ.ಎಂ. ವಿದ್ಯಾಪೀಠದ ಕಾರ್ಯದರ್ಶಿ ಎ.ಜೆ. ಪರಮಶಿವಯ್ಯ, ನಿಪ್ಪಾಣಿಯ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು, ಪೈಲ್ವಾನ್ ತಿಪ್ಪೇಸ್ವಾಮಿ, ಕರಿಯಣ್ಣ, ವಕೀಲರಾದ ಉಮೇಶ್, ಐಶ್ವರ್ಯ ಫೋರ್ಟ್ನ ಕಿರಣ್ ಮೊದಲಾದವರಿದ್ದರು. ಜಮುರಾ ಕಲಾವಿದರು ಪ್ರಾರ್ಥಿಸಿದರು. ಬಸವಲಿಂಗ ದೇವರು ಸ್ವಾಗತಿಸಿದರು. ಪ್ರಕಾಶ ದೇವರು ನಿರೂಪಿಸಿದರು.




ಮೂವತ್ತೆರಡನೇ ವರ್ಷ ಎರಡನೇ ತಿಂಗಳ
ಸಾಮೂಹಿಕ ಕಲ್ಯಾಣ ಮಹೋತ್ಸವ


ಮೂವತ್ತೆರಡನೇ
ಎರಡನೇ ತಿಂಗಳ
ಮಹೋತ್ಸವ


ಮೂವತ್ತೆರಡನೇ ವರ್ಷ ಎರಡನೇ ತಿಂಗಳ
ಸಾಮೂಹಿಕ ಕಲ್ಯಾಣ ಮಹೋತ್ಸವ